3 ನುಡಿದಂತೆ ನಡೆಯುತ್ತಿದ್ದೇವೆ...

ಸಾಧನೆಯ ಮೂರು ವರ್ಷಗಳು



# ಕನ್ನಡಕ್ಕಾಗಿ ಕೈ ಎತ್ತಿ!

ಸಿದ್ದರಾಮಯ್ಯನವರ ಸರ್ಕಾರ ಕನ್ನಡ ನಾಡಿನ ಕಲೆ, ಸಂಸ್ಕೃತಿ ಹಾಗೂ ರಾಜ್ಯದ ಶ್ರೀಮಂತ ಪರಂಪರೆಯನ್ನು ರಕ್ಷಿಸುವ ಹಾಗೂ ಅದನ್ನು ಉತ್ತೇಜಿಸುವ ಬದ್ಧತೆಯನ್ನು ಹೊಂದಿದೆ. ಒಳನಾಡು, ಗಡಿನಾಡು, ಹೊರನಾಡಿನಲ್ಲಿ ಕನ್ನಡದ ಕಂಪು ಪಸರಿಸುವ ಕಾರ್ಯವನ್ನು ಸರ್ಕಾರ ಯಶಸ್ವಿಯಾಗಿ ನಿರ್ವಹಿಸಿದೆ. ಕಲೆ, ಸಾಹಿತ್ಯ, ರಂಗಭೂಮಿ, ಅಧ್ಯಯನಗಳಿಗೆ ಹೆಚ್ಚಿನ ಒತ್ತು ನೀಡಿದೆ.

ಮುಖ್ಯಮಂತ್ರಿಗಳಾಗಿ ನಿಯೋಜನೆಗೊಂಡ ತಕ್ಷಣವೇ ಸಿದ್ಧರಾಮಯ್ಯನವರು ನಾಡಿನ ಸಾಹಿತಿಗಳ ಮನೆಗೆ ಭೇಟಿ ನೀಡಿ ಅವರಿಂದ ಸಲಹೆ ಸೂಚನೆಗಳನ್ನು ಪಡೆದುಕೊಂಡಿದ್ದರು. ಕನ್ನಡದ ಬಗ್ಗೆ ಅಪಾರ ಪ್ರೀತಿ ಆದರಗಳನ್ನು ಹೊಂದಿರುವ ಮುಖ್ಯಮಂತ್ರಿಗಳು ಕನ್ನಡ ಭಾಷೆಯ ಬಳಕೆಯನ್ನು ಉತ್ತೇಜಿಸುತ್ತಿದ್ದಾರೆ ಹಾಗೂ ಕನ್ನಡದಲ್ಲಿ ಆಡಳಿತ ಎನ್ನುವ ನಿಲುವನ್ನು ಪ್ರತಿಪಾದಿಸುತ್ತಿದ್ದಾರೆ.

ಕನ್ನಡ ನುಡಿ, ಗಡಿ, ಸಂಸ್ಕೃತಿ ಮತ್ತು ಸಂಪನ್ಮೂಲಗಳ ಸಂರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಮಾತೃ ಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ ದೊರೆಯಬೇಕು ಎನ್ನುವ ದಿಶೆಯಲ್ಲಿ ಸರ್ಕಾರವು ಎಲ್ಲಾ ಪ್ರಯತ್ನಗಳನ್ನು ನಡೆಸಿದೆ. ಆಂಗ್ಲ ಶೈಲಿಯಲ್ಲಿದ್ದ ರಾಜ್ಯದ ೧೨ ಜಿಲ್ಲೆಗಳ ಹೆಸರನ್ನು ಸರ್ಕಾರ ಕನ್ನಡೀಕರಣಗೊಳಿಸಿ ಭಾಷಾ ಪ್ರೇಮವನ್ನು ಮೆರೆದಿದೆ.

ಕನ್ನಡ ಭಾಷೆಯಲ್ಲಿ ಸ್ವತಂತ್ರ ತಂತ್ರಾಂಶ ರೂಪಿಸುವ ದಶಕದ ಕನಸು ಪ್ರಸಕ್ತ ಸರ್ಕಾರದ ಅವಧಿಯಲ್ಲಿ ನನಸಾಗಿದೆ. ಸರ್ಕಾರವು ಕನ್ನಡಕ್ಕಾಗಿಯೇ ಯೂನಿಕೋಡ್ ತಂತ್ರಾಂಶವನ್ನು ಅಧಿಕೃತವಾಗಿ ಬಿಡುಗಡೆ ಮಾಡಿದೆ. ಮೊಬೈಲ್‌ನಲ್ಲೂ ಕನ್ನಡ ಬಳಸಲು ಅನುವಾಗುವಂತೆ ಪ್ರತ್ಯೇಕ ಆಪ್ ಅನ್ನು ಬಿಡುಗಡೆ ಮಾಡಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ತಂತ್ರಾಂಶ ಅಭಿವೃದ್ಧಿ ಸಮಿತಿಯು ಅಭಿವೃದ್ಧಿ ಪಡಿಸಿರುವ ಈ ಆಪ್ ಯಾವುದೇ ಸ್ಮಾರ್ಟ್ ಫೋನ್‌ನಲ್ಲಿ ಕನ್ನಡ ಲಿಪಿ ಬಳಕೆಗೆ ಸಹಕಾರಿಯಾಗಬಲ್ಲ ತಂತ್ರಾಂಶವನ್ನು ಹೊಂದಿದೆ. ಯಾವುದೇ ಮೊಬೈಲ್‌ನಲ್ಲಿ ಕನ್ನಡದಲ್ಲೇ ಸಂದೇಶ ಕಳುಹಿಸಲು ಹಾಗೂ ಸ್ವೀಕರಿಸಲು ಅಗತ್ಯ ಸಂಪರ್ಕ ಕಲ್ಪಿಸಲು ಈ ತಂತ್ರಾಂಶ ಉಪಯುಕ್ತವಾಗಿದೆ.

ರಾಜ್ಯದಲ್ಲಿ ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ಎಲ್ಲ ಸಂಸ್ಥೆಗಳಿಗೂ ಸಮರ್ಪಕವಾಗಿ ಹಾಗೂ ನ್ಯಾಯಯುತವಾಗಿ ಹಂಚಿಕೆ ಮಾಡಲು ಸಾಂಸ್ಕೃತಿಕ ನೀತಿಯನ್ನು ಜಾರಿಗೆ ತಂದಿದೆ. ಆಸಕ್ತ ಯುವ ಜನತೆಗೆ ಸಾಂಪ್ರದಾಯಿಕ ಹಾಗೂ ಜನಪದ ಕಲೆಗಳಲ್ಲಿ ತರಬೇತಿ ನೀಡಿಕೆಗಾಗಿ ಕರ್ನಾಟಕ ಕಲಾ ವಿಕಾಸ ಯೋಜನೆಯನ್ನು ಜಾರಿಗೆ